# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1262 |
| ಸದಸ್ಯರ ಹೆಸರು | : | ಶ್ರೀಮತಿ. ಎಸ್.ವೀಣಾ ಅಚ್ಚಯ್ಯ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |
| ಉತ್ತರಿಸುವ ದಿನಾಂಕ | : | 24.12.2021. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಒಂದು ಜಿಲ್ಲೆ- ಒಂದು ಬೆಳೆ ಯೋಜನೆಯಂತೆ, ಕೊಡಗು ಜಿಲ್ಲೆಗೆ ಕಾಫಿಯನ್ನು ಘೋಷಣೆ ಮಾಡಿದ್ದು, ಜಿಲ್ಲೆಯ ಕಾಫಿ ಬೆಳೆಗಾರರಿಗೆ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆಯೇ; | ಹೌದು, ರೂಪಿಸಲಾಗಿದೆ |
| ಆ) | ರೂಪಿಸಿದ್ದಲ್ಲಿ, ಸದರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ, ಜಿಲ್ಲೆಯ ಕಾಫಿ ಬೆಳೆ ಸಂರಕ್ಷಣೆ, ಉತ್ತೇಜನ ಹಾಗೂ ವಿಸ್ತರಣೆಗೆ ಕೈಗೊಂಡಿರುವ ಕ್ರಮಗಳ ವಿವರಗಳೇನು; | ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು (DLC) ರಚನೆ ಮಾಡಲಾಗಿರುತ್ತದೆ. ಅದರಂತೆ, ರೈತರಿಂದ ಅರ್ಜಿಯನ್ನು ಸ್ವೀಕಾರ ಮಾಡಿದ್ದು, ಕಾಫಿಗೆ ಸಂಬಂಧಿಸಿದಂತೆ ಸಂಸ್ಕರಣಾ ಘಟಕ ನಿರ್ಮಾಣ, ವಿಶಿಷ್ಟ ಕಾಫಿ ಉತ್ಪಾದನೆ (Specklity Coffee),Sorting, Drying ಹಾಗೂ Pulping ಇತ್ಯಾದಿ ಘಟಕಗಳಡಿಯಲ್ಲಿ ಅರ್ಜಿಯು ಸ್ವೀಕರಿಸಿದ್ದು, ವಿವಿಧ ಹಂತಗಳಲ್ಲಿ ಅನುಮೋದನೆಗೆ ಬಾಕಿ ಇರುತ್ತದೆ ಹಾಗೂ ರೈತರಿಗೆ, ಸಂಘ ಸಂಸ್ಥೆಗಳು, FPOಗಳಿಗೆ ಜಿಲ್ಲಾ ಮಟ್ಟದ ತಾಂತ್ರಿಕ ಕಾರ್ಯಾಗಾರವನ್ನು ಏರ್ಪಡಿಸಲಾಗಿರುತ್ತದೆ. |
| ಇ) | ಒಂದು ಜಿಲ್ಲೆ-ಒಂದು ಬೆಳೆ ಯೋಜನೆಯಂತೆ, ಕೊಡಗು ಜಿಲ್ಲೆಗೆ ಕಾಫಿಯನ್ನು ಘೋಷಣೆ ಮಾಡಿರುವ ಹಿನ್ನಲೆಯಲ್ಲಿ, ಜಿಲ್ಲೆಯ ಕಾಫಿ ಬೆಳೆಗಾರರಿಗೆ ಆಗುವ ಅನುಕೂಲ ಹಾಗೂ ಸಿಗಲಿರುವ ಹೆಚ್ಚುವರಿ ಸೌಲಭ್ಯ ಹಾಗೂ ನೆರವುಗಳೇನು? (ವಿವರ ನೀಡುವುದು); | ಒಂದು ಜಿಲ್ಲೆ-ಒಂದು ಉತ್ಪನ್ನ ಯೋಜನೆಯಿಂದ ಕೊಡಗು ಜಿಲ್ಲೆಯ ಕಾಫಿ ಬೆಳೆಗಾರರು ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (PMFME) ಯೋಜನೆಯಡಿಯಲ್ಲಿ ಈ ಕೆಳಗಿನ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಅಭಿವೃದ್ಧಿಗೆ ಸೌಲಭ್ಯ |

| | | |
|---|---|---|
| | | ಹಾಗೂ ನೆರವುಗಳು ಪಡೆಯಲು ಅವಕಾಶವಿರುತ್ತದೆ.<br>**ವೈಯುಕ್ತಿಕ ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಸಹಾಯಧನ:**<br>ವೈಯುಕ್ತಿಕ ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳಿಗೆ ಅರ್ಹ ಪ್ರತಿ ಘಟಕ ವೆಚ್ಚದ ಶೇ.35 ರಷ್ಟು ಗರಿಷ್ಟ ರೂ.10.00 ಲಕ್ಷಗಳ ಸಹಾಯಧನವನ್ನು ಕ್ರೆಡಿಟ್ ಲಿಂಕ್ಡ್ ಬ್ಯಾಕ್ ಎಂಡೆಡ್ ರೂಪದಲ್ಲಿ ನೀಡಲಾಗುತ್ತಿದೆ.<br>**ರೈತ ಉತ್ಪಾದಕ ಸಂಸ್ಥೆಗಳು (FPO)/ ಉತ್ಪಾದಕ ಸಹಕಾರಿ ಸಂಘಗಳು:**<br>ಕ್ರೆಡಿಟ್ ಲಿಂಕ್ಡ್ ರೂಪದಲ್ಲಿ ಪ್ರಸ್ತಾವನೆ ವೆಚ್ಚದ ಶೇ. 35 ರಷ್ಟು ಸಹಾಯಧನ ನೀಡಲಾಗುತ್ತದೆ.<br>**ಸ್ವಸಹಾಯ ಗುಂಪುಗಳು:**<br>ಆಹಾರ ಸಂಸ್ಕರಣಾ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವ ಸ್ವಸಹಾಯ ಗುಂಪಿನ ಸದಸ್ಯರಿಗೆ ಕಾರ್ಯನಿರತ ಬಂಡವಾಳ ಮತ್ತು ಸಣ್ಣ ಸಾಧನಗಳ ಖರೀದಿಗೆ ರೂ. 40,000/- ಪ್ರತಿ ಸದಸ್ಯರಿಗೆ ಬೀಜ ಬಂಡವಾಳವನ್ನು ನೀಡಲಾಗುತ್ತಿದೆ.<br>**ಸಾಮಾನ್ಯ ಮೂಲ ಸೌಕರ್ಯಗಳಿಗೆ ಬೆಂಬಲ:**<br>ಸಾಮಾನ್ಯ ಮೂಲ ಸೌಕರ್ಯಗಳಿಗಾಗಿ FPO, ಸ್ವಸಹಾಯ ಗುಂಪು, ಸಹಕಾರಿ ಸಂಸ್ಥೆ, ಸರ್ಕಾರಿ ಸಂಸ್ಥೆ ಅಥವಾ ಖಾಸಗಿ ಉದ್ಯಮಗಳಿಗೆ ಕ್ರೆಡಿಟ್ ಲಿಂಕ್ಡ್ ರೂಪದಲ್ಲಿ ಅನುದಾನವು 35% ಮಿತಿಯಲ್ಲಿ ಬೆಂಬಲ ನೀಡಲಾಗುತ್ತಿದೆ.<br>**ಬ್ರ್ಯಾಂಡಿಂಗ್ ಮತ್ತು ಮಾರ್ಕೆಟಿಂಗ್ ಗೆ ಬೆಂಬಲ:**<br>ಯೋಜನೆಯಡಿಯಲ್ಲಿ FPO / ಸ್ವಸಹಾಯ ಗುಂಪು/ ಸಹಕಾರಿ ಸಂಸ್ಥೆ ಅಥವಾ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ SPV(special purpose vehicles) ಗುಂಪುಗಳಿಗೆ ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್ ಗೆ ಒಟ್ಟು ವೆಚ್ಚದ ಶೇ.50 ರಷ್ಟು ಬೆಂಬಲ ನೀಡಲಾಗುತ್ತಿದೆ. |

HORTI 585 HGM 2021

(ಮುನಿರತ್ನ)

**ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ**

**ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು**